ಸಾರ್ವಜನಿಕ ಗ್ರಂಥಾಲಯ ಇಲಾಖೆ ಕಾಯ್ದೆ ಸೆಕ್ಷನ್ 3(2) (ಬಿ)ಯ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು: ಮಾನ್ಯ ಅರಗ ಜ್ಞಾನೇಂದ್ರರವರೆ, ನಿಮ್ಮದು ಯಾವುದು ಶೂನ್ಯವೇಳೆಯದು ಇದೆ ಅದರ ಬಗ್ಗೆ ಹೇಳಿ.

7. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ: ಹುಬ್ಬಳ್ಳಿ ಈದ್ಗಾ ಮೈದಾನದ ಬಗ್ಗೆ.

ಶ್ರೀ ಹೊನ್ನಾಳಿ ಜಬ್ಬರ್‌ಖಾನ್ ಹಯ್ಯಾತ್‌ಖಾನ್: ಮಾನ್ಯ ಅಧ್ಯಕ್ಷರೆ, ನನ್ನನ್ನು ಕರೆದಿಲ್ಲ, ನಾನು 2 ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು: ಮಾನ್ಯ ಖಿರ್ಗೆಯವರೆ, ನಮ್ಮ ಜಬ್ಬಾರ್‌ಖಾನ್ ಹೊನ್ನಾಳಿಯವರು ವಿಷಯವನ್ನು ಹಿಡಿದು ಕೊಂಡಿದ್ದಾರೆ. ಇದರ ಬಗ್ಗೆ ಬೆಳಿಗ್ಗೆ ಎಲ್ಲಾ ತೀರ್ಮಾನವಾಗಿ ಫ್ಯಾಕ್ಸ್ ಕಳುಹಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಆರ್. ರೋಷನ್‌ಬೇಗ್: ಅ ಸದನದಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ.

ಅಧ್ಯಕ್ಷರು: ನೋ ನೋ, ಇದರ ಬಗ್ಗೆ ಬಿಎಸಿಯಲ್ಲಿ ತೀರ್ಮಾನವಾಗಿ ಅವರು ಸರ್ಕಾರದ ಪರವಾಗಿ ನಾವು ಅಡ್ಜರ್ನಮೆಂಟ್ ಮೋಷನ್ ಮೇಲೆ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಹೇಳಿದ್ದಾರೆ. ಮತ್ತೆ ಏತಕ್ಕಾಗಿ ಅದು ಇಲ್ಲಿ?

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್‌ಖಾನ್: ಒಂದು ಮಿನಿಟ್ ತಾವು ಹೇಳಿ.

ಶ್ರೀ ಎ ತನ್ವಿರ್‌ಸೇಠ್: ಮಾನ್ಯ ಸಭಾಧ್ಯಕ್ಷರೆ,

ಶ್ರೀ ಹೊನ್ನಾಳಿ ಜಬ್ಬರ್‌ಖಾನ್ ಹಯಾತ್‌ಖಾನ್: ಗೌರ್ನಮೆಂಟ್ ಅಡ್ವೊಕೇಟ್‌ಗೆ ನಾನು ಫೋನ್ ಮಾಡಿಸಿದೆ. ಅವರು ನಮಗೆ ಏನೂ ಇನ್‌ಫಾರ್ಮೇಷನ್ ಬಂದಿರುವುದಿಲ್ಲವೆಂದು ಹೇಳಿದರು. ನಾವು ಫೋನ್ ಮಾಡಿದ ಮೇಲೆ ಹೇಳಿದ್ದಾರೆ. ಶೂನ್ಯವೇಳೆ ಇವರಿಗೆ ಇದೆ. ಇದು ಬಹಳ ಮಹತ್ವವಾದಂತಹ ಸಮಸ್ಯೆಯಾಗಿದೆ.

ಅಧ್ಯಕ್ಷರು: ಮಾನ್ಯ ಹೊನ್ನಾವಳಿಯವರೆ, ಬೆಳಿಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಇದ್ದರು.

ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್‌ಖಾನ್: ಅವರು ಏನೂ ಕಳುಹಿಸಿಲ್ಲ.

ಅಧ್ಯಕ್ಷರು: ಹೊನ್ನಾಳಿ ಜಬ್ಬಾರ್‌ಖಾನ್‌ರವರಲ್ಲಿ ನನ್ನ ವಿನಂತಿ ಏನೆಂದರೆ, ಬೆಳಿಗ್ಗೆ ಬಿಎಸಿಯಲ್ಲಿ ಇವೆಲ್ಲದರ ಬಗ್ಗೆ ಚರ್ಚೆಯಾಗಿದೆ. ತಾವು ಸ್ವಲ್ಪ ಕಾಲ ಬಂದಿದ್ದೀರಿ. ಅದಾದ ಮೇಲೆ ಸದನದಲ್ಲಿ ಬಂದು ಮಾನ್ಯ ಉಪಮುಖ್ಯಮಂತ್ರಿಯವರು ಏನು ನಾಳೆ ಸುಪ್ರೀಂಕೋರ್ಟಿನ ಮುಂದೆ ಡೇಟ್‌ಇದೆ. ಅದಕ್ಕೆ ಮುಂದು ಒಂದು ತಿಂಗಳ ಕಾಲಾವಧಿ ಎಷ್ಟು ಕೊಡುತ್ತಾರೆ ಏನೋ, ಎಂಬ ಬಗ್ಗೆ ಹೇಳಿದರು. ತಾವು ಕೇಳಬೇಕು. ಅದರ ಬಗ್ಗೆ ಸದನದಲ್ಲಿ ಹೇಳಿದ್ದಾರೆ. ಮತ್ತೆ ಅದರ ಬಗ್ಗೆ ಚರ್ಚೆ ಏಕೆ? ಅದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅವರಿಗೆ ಏನು ಡೌಟ್ ಬಂದಿದೆ ಎಂದರೆ, ಆನ್‌ಲೆಸ್ ಇವರು ಅಡ್ವೋಕೇಟ್ ಜನರಲ್‌ರವರು ಅಪಿಯರ್ ಅಗಿ ಟೈಮ್‌ನ್ನು ಕೇಳದೇಹೋದರೆ, ಅಡ್ವೊಕೇಟ್ ಆನ್ ರೆಕಾರ್ಡ್ಸ್ ಟೈಮ್‌ನ್ನು ಕೇಳಿದರೆ ಅದಕ್ಕೆ ಕೊಡುವುದಿಲ್ಲ. ಏಕೆಂದರೆ ಜ್ಯೂನಿಯರ್ ಅಡ್ವೊಕೇಟ್‌ಗಳು ಇಂತಹ ಕೇಸ್‌ನಲ್ಲಿ ಅಡ್ಜರ್ನಮೆಂಟ್ ಕೇಳಿದರೆ ಕೊಡುವುದಿಲ್ಲ. ಸ್ಟೇಟ್ ಪರವಾಗಿ Unless the Advocate-General appears and seeks permission for extending the time, then only it will be granted. ಅದು ಏನಾಗುತ್ತದೆ. ಬರೇ ಸಂಜೆ ಹೆಗಡೆಯವರಿಗೆ ನೀವು ಪತ್ರ ಬರೆದರೆ he is not a senior advocate ಅದಕ್ಕಾಗಿ ಅವರಿಗೆ ಟೈಮ್ ಕೊಡುವುದೂ ಇಲ್ಲ, ನಾವು ಅನೇಕ ಸಾರಿ ಇದಕ್ಕೆ ಪ್ರಯತ್ನಿಸಿದ್ದೇವೆ, ಮುಖ್ಯಮಂತ್ರಿಯವರು ಸ್ಪಷ್ಟವಾಗಿ ಅಡ್ವೋಕೇಟ್ ಜನರಲ್‌ರವರ ಮೂಲಕ ಇದಕ್ಕೆ ನಾವು ಅಡ್ಜರ್ನ್‌ಮೆಂಟ್ ತೆಗೆದುಕೊಳ್ಳುತ್ತೆಂದು ಹೇಳಿದರೆ ಅದು ಒಂದು ಒಳ್ಳೆಯ ಮೆಸೇಜ್ ಹೋಗುತ್ತದೆ, ಇಲ್ಲದಿದ್ದರೆ ನಾಳೆ ಸುಮ್ಮನೆ ಡಿಸ್ಮಿಸ್ ಮಾಡಿದರೆ ಇಲ್ಲಿಯವರೆಗೆ ಏನೇನು ಪ್ರಯತ್ನ ಮಾಡಿದೆಲ್ಲವೂ ಕೂಡ ವಿಫಲವಾಗುತ್ತದೆಂಬುದು ಮಾನ್ಯ ಜಬ್ಬಾರ್‌ಖಾನ್ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಅಧ್ಯಕ್ಷರು: ಚೆಲುವರಾಯಸ್ವಾಮಿಯವರೇ, ನಿಮಗೆ ಬೆಳಿಗ್ಗೆ ಈ ಕಾರ್ಯವನ್ನು ವಹಿಸಲಾಗಿತ್ತು, ನೀವು ಮಾನ್ಯ ಮುಖ್ಯಮಂತ್ರಿಗಳನ್ನು ತಕ್ಷಣ ದೂರವಾಣಿ ಮೂಲಕ ಸಂಪರ್ಕಿಸಿ ಈ ವಿಷಯದಲ್ಲಿ ಏನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳಬೇಕು, ಅದಕ್ಕೆ ಏನೇನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿ ಸದನಕ್ಕೆ ತಿಳಿಸಿ ಎಂದು ನಾನು ಹೇಳಿದ್ದೆ, ನೀವು ಅವರನ್ನು ಸಂಪರ್ಕಿಸಿದ್ದರೆ ಮಾಹಿತಿಯನ್ನು ಸದನಕ್ಕೆ ತಿಳಿಸಬೇಕು.

ಶ್ರೀ ಎ ತನ್ವೀರ್ ಸೇತ್: ಇದೇ ಸದನದಲ್ಲಿ ಕಂದಾಯ ಸಚಿವರು, ಪ್ರತಿ ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇದೇ ಸದನದಲ್ಲಿ ನಾವು ಮಂಡಿಸುತ್ತೇವೆಂದು ಹೇಳಿದ ಮೇಲೆಯೂ ನೀವು ಬಿ.ಎ.ಸಿ.ಯಲ್ಲಿ ಏನು

ತೀರ್ಮಾನ ತೆಗೆದುಕೊಳ್ಳುತ್ತೀರೋ, ಅಥವಾ 30 ವರ್ಷದಿಂದ ಏನು ಮೊಕದ್ದಮೆ ನಡೆಯುತ್ತಿದೆ, ಆ ವಿಚಾರದಲ್ಲಿ ಸ್ಪಷ್ಟವಾಗಿ ಏನಾಗಿದೆ ಎಂಬುದನ್ನು ನಮ್ಮ ಗಮನಕ್ಕೆ ತರಬೇಕು. ಸದನದಲ್ಲಿ ನಡೆದಿರತಕ್ಕಂಥ ಮಾತು, It becomes the property of the House.

ಶ್ರೀ ಎಸ್. ಚೆಲುವರಾಯಸ್ವಾಮಿ: ತಮ್ಮ ಕೊಠಡಿಯಲ್ಲಿ ಎಲ್ಲಾ ಮುಖಂಡರುಗಳ ಜೊತೆ ಈ ವಿಷಯ ಕೋರ್ಟಿನಲ್ಲಿರುವುದರಿಂದ ಚರ್ಚೆ ಮಾಡುವುದು ಸೂಕ್ತವಲ್ಲ ಎಂದಾಗ ಅವರೂ ಸಹ ಚರ್ಚೆ ಮಾಡತಕ್ಕಂಥದ್ದು ಪ್ರಶ್ನೆಯಲ್ಲ, ನಾಳೆ ಸುಪ್ರೀಂಕೋರ್ಟಿನಲ್ಲಿ ಬರತಕ್ಕಂಥ ಕೇಸಿನಲ್ಲಿ, ಸಮಿತಿಯಿಂದ ಒಂದು ದಿನಾಂಕವನ್ನು ಅವರೇನು ಕೇಳುತ್ತಿದ್ದಾರೆ, ಸರ್ಕಾರದ ಪರವಾಗಿಯೂ ಸಹ ನಾವು ಕಾಲಾವಕಾಶದ ಮೂಲಕ ಕೇಳುವುದರ ಮೂಲಕ ನಾವು ಇದನ್ನು ಮುಂದಿನ ದಿನಗಳಲ್ಲಿ ಎಲ್ಲಾ ಪಕ್ಷದವರೂ ಸೇರಿ ಮುಖ್ಯಮಂತ್ರಿಯವರು ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವೆಂದು ಏನು ನಮ್ಮ ವಿರೋಧಪಕ್ಷದ ನಾಯಕರು, ಖರ್ಗೆಯವರು ಕೆಲವು ಮುಖಂಡರುಗಳು ತಿಳಿಸಿದರು, ಅದರಂತೆ ನಾನು ದೆಹಲಿಯಲ್ಲಿರುವಂಥ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಂಪರ್ಕಿಸಿದಾಗ, ಮುಖ್ಯಮಂತ್ರಿಯವರು ಇದಕ್ಕೆ ಒಪ್ಪಿದ್ದಾರೆ. ನಾನು ಅಡ್ವೋಕೇಟ್ ಜನರಲ್‌ರವರ ಮೂಲಕ ಟೈಮ್ ತೆಗೆದುಕೊಳ್ಳಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ತಿಳಿಸಲಿಕ್ಕೆ ಅವರು ಅನುಮತಿಯನ್ನು ಕೊಟ್ಟಿದ್ದಾರೆ. ಇವತ್ತಿನ ಸಂಜೆಯೊಳಗೆ ಅಡ್ವೋಕೇಟ್ ಜನರಲ್‌ರವರಿಗೆ ಹೇಳುತ್ತಾರೆ. ಈಗ ಅವರಿನ್ನೂ ಹೇಳಲಿಲ್ಲ. ಎಂದಿದ್ದಾರೆ, ಹಾಗಾಗಿ ಅದರಿಂದ ಯಾವುದೇ ತೊಂದರೆಯಿಲ್ಲ.

ಅಧ್ಯಕ್ಷರು: ಆರಗ ಜ್ಞಾನೇಂದ್ರವರೇ ಎರಡು ನಿಮಿಷದೊಳಗೆ ಮಾತನಾಡಿ ಮುಗಿಸಬೇಕು.

(ಆ) ವಿಷಯ: ತೀರ್ಥಹಳ್ಳಿ ತಾಲ್ಲೂಕು ಹಣಿಗೆರೆ ಗ್ರಾಮದಲ್ಲಿರುವ ಎರಡು ವಿಗ್ರಹಗಳನ್ನು ಒಡೆದು ಹಾಕಿರುವ ಬಗ್ಗೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ನಿನ್ನೆ ಸಂಜೆಯ ಹೊತ್ತಿಗೆ ನನ್ನ ಕ್ಷೇತ್ರದ ಹಣಿಗೆರೆ ಎಂದು ಒಂದು ಹಳ್ಳಿಯಿದೆ. ಅಲ್ಲಿರತಕ್ಕಂಥ ಗುಡಿಯಲ್ಲಿ ಎರಡು ವಿಗ್ರಹಗಳನ್ನು ಪುಡಿ ಪುಡಿ ಮಾಡಿ ಎಸೆದಿದ್ದಾರೆ. ಈ ಕೃತ್ಯದಿಂದ ನನ್ನ ಕ್ಷೇತ್ರ ತುಂಬಾ ಉದ್ವಿಗ್ನ ಪರಿಸ್ಥಿತಿಯಲ್ಲಿ ಇವತ್ತು ಇದೆ, ನಿನ್ನೆ ಊರಿನವರು ಸೇರಿ ಆ ಇಬ್ಬರು ಅಪರಾಧಿಗಳನ್ನು ಹಿಡಿದಿದ್ದಾರೆ. ಆಶ್ಚರ್ಯವೆಂದರೆ ತೀರ್ಥಹಳ್ಳಿಯ ಹಣಿಗೆರೆ, ಅಲ್ಲಿಂದ ಕುಂದೂರ ಕೂಲಂಬಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಭಾಗದವರು ಅವರು. ಅಲ್ಲಿಂದ ಒಂದು ನನ್ನ